Regd. No M. 1299 SATYAVADI] ...917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 248 | ಗುರುವಾರ 29—5—47 | ಬಿಡಿ ಪ್ರತಿ 3 ಪೈ

...ನೇ ದಿನ

...ಚೆಟ್ಟ್ಯರ ಕೊಲೆ ಪ್ರಯತ್ನ !

(ನಮ್ಮ ವಿಶೇಷ ನರದಿಕಾರರಿಂದ)

ಪುಟ್ಟಣ ಚೆಟ್ಟಿ ಪುರಭವನ (ಬೆಂಗಳೂರು) ಮೆ 28 — ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಆಯುಷ್ಯ ಅಧಿವೇಶನ ಈ ದಿವಸ 12 ಗಂಟೆಗೆ ಸರಿಯಾಗಿ ಸಂಸ್ಥಾನದ ಪ್ರಧಾನಿಗಳಾದ ದಿವಾಕ ಬಹದ್ದೂರ್ ಸರ್. ಎ. ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಆಕರ್ಷಿಟ್‌ರವರು ಸಭೆಯನ್ನು ಪ್ರವೇಶಿಸಿದಾಗ ಸದಸ್ಯರು ಮತ್ತಿತರರು ತಮ್ಮ ಸ್ಥಾನಗಳಿಂದ ಎದ್ದು ಗೌರವವನ್ನು ಸೂಚಿಸಿದರು. ಅಧಿಕಾರಿ ಮತ್ತು ಖಾಸಗೀ ಸಚಿವರುಗಳು ಸಭೆಯಲ್ಲಿ ಆಸನಾರೂಢರಾಗಿದ್ದರು.

ವಿಶೇಷ ಅತಿಥಿಗಳ ಪೀಠದಲ್ಲಿ ಶ್ರೀ ಗುಂಡಪ್ಪಗೌಡರು ಮುಂತಾದವರು ಮಂಡಿಸಿದ್ದರು.

ಪ್ರೇಕ್ಷಕ ಗ್ಯಾಲರಿಯಲ್ಲಿ ಸ್ತ್ರೀ ಮತ್ತು ಪುರುಷರ ಸಂಖ್ಯೆ ಸಾಧಾರಣವಾಗಿದ್ದಿತು.

ದಿವಾಕ — ಅಧ್ಯಕ್ಷರ ಭಾಷಣಕ್ಕೆ ಮುಂಚೆಯೇ ಕಾಂಗ್ರೆಸ್ ಪಕ್ಷದ ನಾಯಕ ಸ್ಥಾನದಲ್ಲಿರುವ ಶ್ರೀ ಪಾಲಹಳ್ಳಿಯವರು ಕಾರಣ ತೋರಿ (ಸತ್ಯವಾದಿಯಲ್ಲಿ ತಂತಿ ಸುದ್ದಿ ನಿನ್ನೆ ಅಚ್ಚಾಗಿದೆ) ತಮ್ಮ ಪಕ್ಷದೊಡನೆ ಸಭಾ ಪರಿತ್ಯಾಗ ಮಾಡಿದರು.

ದಿವಾಕ — ಅಧ್ಯಕ್ಷರ ಭಾಷಣದ ತುರ್ಜುಮೆಯನ್ನು ಸರ್ಕಾರಿ ತುರ್ಜುಮೆ...ನ್ನು ಮತ್ತು ಕನ್ನಡ ಸಾಹಿತ್ಯ ಸಮ್ಮೇಳನದ ವ...ಹಾಧ್ಯಕ್ಷರೂ ಆದ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಓದಿದರು. ಕೊಲೆ ಮಾಡಲ್ಪಟ್ಟ ಶ್ರೀ ರಾಮಸ್ವಾಮಿ ಬಗ್ಗೆ ಸಂತಾಪ ಸೂಚಕ ನಿರ್ಣಯವಾಯಿತು.

'ದಿವಾಳಿಯುದ ಲೇವಾದೇವಿ ಕಸಬುದಾರ, ಧರ್ಮರತ್ನಾಕರ ಗೋಪಾಲರಾವ್' ಸಂಬಂಧದ ನೊಕದ್ದಮೆಯಲ್ಲಿ ಶಂಕರ ಲಿಂಗೇಗೌಡನಾದ ನಾನು ...ನ್ಮಾಹಾರಾಜರವರ ಖಾಸಗೀ ...ರ್ಶಿ ಅಮಾತ್ಯ ಶಿರೋಮಣಿ ತಂಬೂಚೆಟ್ಟಿಯವರನ್ನೂ ಕಾ

ದಂಗೆ ಅಡಗಿಸಲು ಹೆಚ್ಚು ಸೈನ್ಯ

ಕಲ್ಕತ್ತಾ ಮೇ 27 — ಜೂಕ 2 ರ ನಂತರ ಗಲಭೆ ಭೀತಿಯಿರುವುದರಿಂದ ಬಂಗಾಳಕ್ಕೆ ಹೆಚ್ಚು ಸೈನ್ಯ ಅವಶ್ಯಕವೆಂದು ಗವರ್ನರರು ಹೇಳಿದ್ದಾರೆ.

ವಲುಗಾರ ಕಾರ್ಯದರ್ಶಿಯವರನ್ನೂ ನ್ಯಾಯಾಧೀಶ ಮೇದಪ್ಪರವರನ್ನೂ ಮತ್ತು ಮಾಜೀ ಸಚಿವರಾದ ಪುಲ್ಲಾರೆಡ್ಡಿಯವರನ್ನೂ ಕೊಲೆ ಮಾಡುತ್ತೇನೆ ಎಂದು ಸಾಕ್ಷ್ಯ ತಂದ ಅಧಿಕಾರಿಗಳು ಅರೀತಿ ಸಾಕ್ಷ್ಯವಿತ್ತಿದ್ದಾರೆ. ಈ ವಿಷಯ ಮೈಸೂರಿಗೇ ಮಹಾ ಅವಮಾನಕರವಾದುದು ಎಂದು ಶ್ರೀ ಶಂಕರ ಲಿಂಗೇಗೌಡರು ಹೇಳಿದರು.

ದಿವಾನರು ಆ ವ್ಯವಹಾರ ನ್ಯಾಯಾಸ್ಥಾನದಲ್ಲಿದೆ ಎಂದರು.

ರಾಜ್ಯಾಂಗ ರಚನಾ ಸಭೆಗೆ ಮೈಸೂರು ಸೇರುವ ವಿಷಯವನ್ನು ಜೂಕ 2 ನೇ ತಾರೀಖಿನವರೆಗೆ ಹೇಳಲಾಗುವುದಿಲ್ಲ ಎಂದು ದಿವಾಕ — ಅಧ್ಯಕ್ಷರು ಶ್ರೀ ಶಿವಪ್ಪನವರ ಪ್ರಶ್ನೆಗೆ ಉತ್ತರವಿತ್ತರು.

ದ್ವಿತೀಯ ಬಾರಿ ಕಾಂಗ್ರೆಸ್ ಸಭಾ ಪರಿತ್ಯಾಗ

ವಿಮೆಯ ಕಾರ್ಯಗಳಿಗೆ ಸಂಬಂಧಪಟ್ಟ (ತಿದ್ದುಪಡಿ) ಮಸೂದಾ ಕಾನೂನನ್ನು ಶ್ರೀ ಕನ್ನಕರತ್ನ ರಾಜುರವರು ಸಭೆಯು ಮಂದೆ ಮಂಡಿಸಿದರು.

ಪೂರ್ಣ ಜವಾಬ್ದಾರಿ ಸರ್ಕಾರದ ಮತ್ತು ಶ್ರೀ ಹನುಮಂತಯ್ಯನವರ ಬಿಡುಗಡೆಯಾಗಬೇಕೆಂಬ ಬಗ್ಗೆ ಈ ಮಸೂದೆಯನ್ನು ವಿರೋಧಿಸಿ, ಸಭಾ ಪರಿತ್ಯಾಗ ಮಾಡುತ್ತೇನೆ. ಎಂದು ಶ್ರೀ ಪಾಲಹಳ್ಳಿಯವರು ತಮ್ಮ ಪಕ್ಷದೊಡನೆ ಸಭೆ

ವೈಸರಾಯರು ಡೆಲ್ಲಿಗೆ

ಲಂಡನ್ ಮೆ 28 — ಜೂಕ 2 ರಲ್ಲಿ ವಿಸರ್ಜಿಸಲಾಗಿರುವ ಭಾರತ ಮುಖಂಡರ ಸಮ್ಮೇಳನದಲ್ಲಿ ಭಾಗವಹಿಸಲು ವೈಸರಾಯರು ಡೆಲ್ಲಿಗೆ ನಾಳೆ ಹೊರಡುವರು ಅವರ ಯೋಜನೆ ನಡೆಸಲು ಸಂಪೂರ್ಣಾಧಿಕಾರವು ಅವರಿಗೆ ಕೊಡಲಾಗಿದೆಯೆಂದು ಹೇಳಲಾಗಿದೆ.

...ಯನ್ನು ತ್ಯಜಿಸಿದರು

ಈ ಮಸೂದೆಯನ್ನು ಪ್ರಜಾಪಕ್ಷವು ಅಂಗೀಕರಿಸಿ ಭಾಷಣ ಮಾಡಿದೆ

ಶ್ರೀ ಮರಿಯಪ್ಪನವರು ಈ ಮಸೂದೆಯನ್ನು ಅಂಗೀಕರಿಸುತ್ತಾ ಕಾಂಗ್ರೆಸ್ ಸಂಸ್ಥಾನವನ್ನು ಸಂಪೂರ್ಣವಾಗಿ ಪ್ರತಿನಿಧಿಸುತ್ತಿಲ್ಲವೆಂಬುದು ಶುದ್ಧಾಂಗ ತಪ್ಪು ಈ ಸರ್ಕಾರದಲ್ಲಿ ನಂಬಿಕೆ ಪವಿತ್ರವಾಗಿದೆ ಎಂದರು

ಮುಸ್ಲಿಂ ಲೀಗಿನ ನಾಯಕ ಜ|| ಖಲೀಲ್ ಈ ಮಸೂದೆಯ ಮೇಲೆ ಮಾತನಾಡುತ್ತಾ, ಕಾಂಗ್ರೆಸ್ಸಿಗರು ಭಾವಚಿತ್ರ ಹಿಡಿದು ಓಟು ಬೇಟೆ ಮಾಡುತ್ತಾರೆ, ಸಾಮ್ರಾಜ್ಯವಾದ ಪತನವಾದ ನಂತರ ಮೈಸೂರು ಸ್ವತಂತ್ರವಾಗಿಯೇ ಉಳಿಯಬೇಕು.. ರಾಜ್ಯಾಂಗ ಸಭೆ — ಆ ಗುಂಪಿಗೆ ಸೇರಿ ಜಗಳವಾಡುವುದು ಬೇಡ. ಕಾಂಗ್ರೆಸಿಗರು ಸಂಸ್ಥಾನವನ್ನೆಂದಿಗೂ ಪ್ರತಿನಿಧಿಸುವುದಿಲ್ಲ. ಈ ಮಸೂದೆಯನ್ನು ಒಪ್ಪುತ್ತೇವೆ ಎಂದರು. (ಚರ್ಚೆ ನಡೆಯುತ್ತಿದೆ.

ಸಂಸ್ಥಾನದಲ್ಲಿ ತೊಗರಬೇಳೆ ಅಭಾವದ ಬಗ್ಗೆ ಶ್ರೀ ಶಾಮರಾಜಯ್ಯಂಗಾರ್ಯರ ನಿಲುಪಳಿ 4 ಗಂಟೆಗೆ ಚರ್ಚೆಗೆ ಬರುತ್ತವೆ.

ವೃತ್ತಾಂತ ಸಂಗ್ರಹ

ಕಲ್ಕತ್ತ ಮೆ 27 — ಈ ದಿನ ಬೆಳಿಗೆ ಪೋಲೀಸರ ಮೇಲೆ 2 ಬಾಂಬು ಬಿದ್ದವು.

ಂ ಂ

ವಾಷಿಂಗ್‌ಟನ್ ಮೆ 22 — ಯುದ್ಧ ವಿಪತ್ತಿಗೆ ಗುರಿಯಾದ ಯೂರೋಪಿ ಮತ್ತು ಏಷ್ಯಾ ಖಂಡಗಳ ದೇಶಗಳಿಗೆ ಪರಿಹಾರಕ್ಕೆ 35 ಕೋಟಿ ಡಾಲರ್ ಸಹಾಯ ನಿರ್ಣಯಿಸಲಾಗಿದೆ.

ಂ ಂ

ಬ್ರಿಟೀಷು ಆಕ್ರಮಿತ ಜರ್ಮನೀ ಭಾಗದಲ್ಲಿಯ ಜರ್ಮನಿ ಪತ್ರಿಕೆಗಳನ್ನು ರಷ್ಯಾಕ್ಕೆ ವ್ಯತಿರೇಕವಾಗಿ ಪ್ರಚಾರಮಾಡಲಿಕ್ಕೆ ಬ್ರಿಟೀಷು ಅಧಿಕಾರಿಗಳು ಆಜ್ಞಾಪಿಸಿರುವಂತೆ ರಷ್ಯಾ ಆಕ್ರಮಿತ ಜರ್ಮನಿಯಲ್ಲಿಯು ಒಂದು ಪತ್ರಿಕೆಯು ತಿಳಿಸಿದೆ.

ಂ ಂ

ಮದರಾಸು ಮೇ 27 — ಗಿರಣಿ ಬಟ್ಟೆ ಮೇಲೆ ಕಂಟ್ರೋಲನ್ನು ತೆಗೆಯುವಲ್ಲಿ ಸರಕಾರ ಯೋಚಿಸುತ್ತಿಲ್ಲವೆಂದು ಹೇಳಲಾಗಿದೆ.

ಂ ಂ

ನವದೆಹಲಿ ಮೆ 28 — ದಕ್ಷಿಣ ಭಾರತದಿಂದ ಸೈನ್ಯ ಪಡೆಯು ಪಂಜಾಬಿಗೆ ಅಲ್ಲಿಯ ಶಾಂತಿ ಪರಿಪಾಲನೆಗೆ ಸಹಾಯ ಮಾಡುವುದಕ್ಕಾಗಿ ...ವೆಯೆಂದು ಹೇಳಲಾಗಿದೆ.

ಂ ಂ

ಕಲ್ಕತ್ತಾ ಮೇ 27 — ಗಲಭೆಯುಲ್ಲಿ 5 ಮಂದಿ ಸತ್ತು 23 ಮಂದಿ ಗಾಯಗೊಂಡಿರುವುದೆಂದೂ ಪೋಲೀಸರು 106 ಮಂದಿ ದಸ್ತಗಿರಿ ಮಾಡಿರುವರೆಂದು ಹೇಳಲಾಗಿದೆ.

ಂ ಂ

ಕರಾಚಿ ಮೇ 27 — ಪಾಕೀಸ್ತಾನ ರಾಜ್ಯಾಂಗ ಸಭೆಯು ಅಧ್ಯಕ್ಷತೆಯನ್ನು ಮಿ|| ಜಿನ್ನರು ವಹಿಸುವರೆಂದು ಲೀಗಿನ ಕಾರ್ಯಕಾರಿ ಸಮಿತಿ ಸದಸ್ಯರಾದ ಮಿ|| ಖುರೋರವರು ಹೇಳಿದ್ದಾರೆ.

ಂ ಂ

ಕರಾಚಿ — ಮೆ 27 — 4 ಮಂದಿ ಒಂದು ಟ್ಯಾಕ್ಸಿಯನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡು ಸ್ವಲ್ಪ ದೂರ ಹೋದನಂತರ ಡ್ರೈವರಿಗೆ ಗುಂಡುಹೊಡೆದು ಅವನಲ್ಲಿದ್ದ ಎಲ್ಲಾ ಹಣಕಾಸನ್ನು ಚಿನ್ನದ ಗುಂಡಿಗಳನ್ನು ತೆಗೆದುಕೊಂಡು ಅವನನ್ನು ಅಚೆಗೆ ಎಸೆದು ಟ್ಯಾಕ್ಸಿಯೊಡನೆ ಪರಾರಿಯಾಗಿರುವರು. ಇವರ ಪತ್ತೆಗಾಗಿ ಪೋಲೀಸರು ಏಮಾನ ಪಡೆ ಕಳಿಸಿದ್ದಾರೆ.

ಧ. ಯು. ಸ ಬುಲೆಟಿನ್

ಪ್ರಚಾರಕ—ರಾಜಾ ಎಸ್. ಗುರುರಾಜಾ ಚಾರ್ಯ. ಅಖಿಲ ಕರ್ನಾಟಕ ಸನಾತನಿಗಳ ಸಂಘ, ಮಂತ್ರಾಲಯ.

ಸನಾತನಿಗಳ ವಿಜಯ

ದೆಹಲಿ ಮೆ 13

ಅ. ಭಾ. ವರ್ಣಾಶ್ರಮ ಸ್ವರಾಜ್ಯ ಸಂಘದ ಅಧ್ಯಕ್ಷರು ತಂತಿಯ ಮೂಲಕ ಈ ರೀತಿ ತಿಳಿಸುತ್ತಾರೆ ಪಂಢರಪುರದಲ್ಲಿ ಶ್ರೀ ಸಾನೆ ಗ.ರ.ಜಿಯವರ ಆಮರಣ ಉಪವಾಸವು ನಿಷ್ಫಲವಾಯಿತು. ಅವರು ಉದ್ದಿಶ್ಯವನ್ನು ಸಾಧಿಸಲಸಮರ್ಥರಾಗಿ ಉಪವಾಸ ನಿಲ್ಲಿಸಿದರು. ಅವರ ವಿಚಾರವಾಗಿ ಕಾಂಗ್ರೆಸ್ ಪಕ್ಷೀಯ ಪತ್ರಿಕೆಗಳು ಜನರನ್ನು ಅಡ್ಡ ಮಾರ್ಗದಲ್ಲಿ ಕೆಡಹುವ ಸುಳ್ಳು ಪ್ರಚಾರ ಮಾಡಿದ್ದಾರೆ. ಜನರು ಖಂಡಿತ ವಂಚಿತರಾಗಬಾರದು. ಎಲ್ಲಿಯವರೆಗೆ ಸನಾತನಿಗಳ ರಕ್ತದ ಕೊನೆ ಬಿಂದುವಿರುವುದೊ ಅಲ್ಲಿಯವರೆಗೆ ಹರಿಜನರು ದೇವಾಲಯ ಪ್ರವೇಶಿಸಲಾರರು ಎಂದು ತಿಳಿಸಿದ್ದಾರೆ

ಧರ್ಮವೀರರ ಬಂಧನ

ದೆಹಲಿ ಮೆ 13

ಎಡು ಧರ್ಮವೀರರೆಂದೆಗಳು ಧರ್ಮಯುದ್ಧದ 16 ನೇ ಸೇನಾಧಿಪತಿಗಳಾದ ಶ್ರೀ ಸೌರಂಗದಾಸರವರ [ಮಥುರಾ] ನೇತೃತ್ವದಲ್ಲಿ ಈ ದಿವಸ ' ವೈಸ್‌ರೀಗಲ್ ಲಾಡ್ಜ್ ' ನಲ್ಲಿ ಬಂಧಿತರಾದವು. ಆ ಕಾಲದಲ್ಲಿ ಸತ್ಯಾಗ್ರಹ ಮಾಡಿದೆ ಕುರುಡರನ್ನು ಪೋಲೀಸರು ಬಂಧಿಸಲಿಲ್ಲ. ಆ ಕುರುಡರು ' ನಾವು ಕುರುಡರಾದ ಮಾಕ್ಕಕ್ಕೆ ಸಮ್ಮ ಧರ್ಮಶ್ರದ್ಧೆಯು ಕುರುಡೆ ? ನಮಗೆ ನಮ್ಮ ಧರ್ಮಯುದ್ಧದಲ್ಲಿ ಸ್ವಲ್ಪವಾದರೂ ತ್ಯಾಗ ಮಾಡುವ ಅಧಿಕಾರವಿಲ್ಲವೇ ? ಆದ್ದರಿಂದ ನಮ್ಮನ್ನೂ ಬಂಧಿಸಿ ' ಎಂದರು. ಸಂತಂಕ್ಕಪೋಲೀಸರು ಅವರನ್ನು ಬಂಧಿಸಿ ಜೈಲಿಗೊಯ್ದರು.

——

ಬೊಂಬಾಯಿನ ಗಾಯತ್ರೀ ಸ್ವಾಮಿ, ಶ್ರೀ ಎಂಮಹಿತರೂ, ಅಳ್ವಾರಿನ ಕಾಲೇಜು ಪ್ರೊಫೆಸರ್ ಶ್ರೀ ಕೃಷ್ಣಮಾಚಾರ್ಯರುಗಳು ಸಂಘದವರೊಡನೆ ಮಾತುಕತೆ ನಡೆಸಲು ದೆಹಲಿಗೆ ಬಂದಿದ್ದಾರೆ.

ಐ ಟಿ ಯಾ ಲ್

ಟ್ರೇಡ್ ITL ಮಾರ್ಕ್

ಐಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಹಾಯಿಲೆಯವರ ಕೊಠಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು, ಇತ್ಯಾದಿ ಕೆಲಸಗಳಿಗೆ ನೆಂವಾಗುವ ಸಂಸಾರ ಸೇವಕ.

ಹಿತವಾದ ಇನರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Quality Printing

L. N. Press

Sriramp.et, MYSORE

.... ಪುಡ್‌ಲ್ಯಾಂಡ್ಸ್ ಮೈಸೂರು ...

ಇ 25-5-47 ರಿಂದ ಕಿಕ್ಕಿರಿದ ನೇ 4 ವಾರ

ನಾವು ಇಬ್ಬರು

(ತಮಿಳು.)

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂತಲು * ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

ಪ್ರತಿದಿನ 2 ಆಟಗಳು

ಶನಿವಾರ ಮತ್ತು ಭಾನುವಾರಗಳಲ್ಲಿ ೩ - ೩೦ ಕ್ಕೆ ನ್ಯಾಟ್ಟಿ ಅಂಟು

' ಶಕ್ತಿಸುಧಾ ' ಸೇವಿಸಿ ಶಕ್ತಿಯನ್ನು ಹೊಂದಿ

ಬ್ರಿಟಿಷ್ ಪ್ಲಾನಿಂಗ್ ಆಫೀಸರು ಮತ್ತು ಅವರ ಪತ್ನಿ

At Opera

6 ನೇ ವಾರ

ಟಿ. ಎಸ್. ಬಾಲಯ್ಯ,

ತಪಮಣಿದೇವಿ, ಮಾಲತಿ,

ರಾಮಚಂದ್ರ ನಟಿಸಿದ

ರಾ ಜ ಕು ಮಾ ರಿ

(ತ ಮಿ ಳು)

ಸ ತ್ಯ ವಾ ದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಪಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚಸೇರಿ 1--12--0

Edited, Printed and Published by M. S Krishna Rao at the Satyavadi Press Chamarajendra Agrahar, Mysore.